

‘ದರ್ಶನ್ನು ದರ್ಶನ್ನು ನಿನ್‌ಮಾತು ಚಿಕನ್ನು...’
ಹಾಡಿನಲ್ಲಿ ದರ್ಶನ್ ಹಾಗೂ ರಕ್ಷಿತಾ

ಎಂದು ಸಾಹಿತ್ಯ ಬದಲಿಸಿದೆ. ಬದ್ರಿನಾಥ್ ಹಾಗೂ ಮಂಜುಳಾ ಗುರುರಾಜ್ ಅವರು ಮೂಲ ಗಾಯಕ–ಗಾಯಕಿ. ಅವರನ್ನು ಸ್ಟುಡಿಯೊಗೆ ಕರೆಸಿ, ತಿದ್ದುಪಡಿ ಮಾಡಿದ ಹಾಡನ್ನು ಮತ್ತೆ ರೆಕಾರ್ಡ್ ಮಾಡಿದೆವು. ಆಮೇಲೆ ಮಿಕ್ಸ್‌ಮಾಡಿದ್ದೂ ಆಯಿತು. ಸಿನಿಮಾ ಬಿಡುಗಡೆಯಾಗುವ ಹೊತ್ತಿಗೆ ಇಷ್ಟೆಲ್ಲ ಚಕಚಕನೆ ಆಯಿತು. ನಿರ್ಮಾಪಕ ಬೈರೇಗೌಡರು ಸಂತೋಷಪಟ್ಟರು. ಜನರೂ ಹಾಡಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಹಾಡು ಸೂಪರ್‌ಹಿಟ್ ಆಯಿತು. ದರ್ಶನ್, ರಕ್ಷಿತಾ ಜೋಡಿಯ ಜನಪ್ರಿಯ ಗೀತೆಗಳಲ್ಲಿ ಇದೂ ಒಂದು.

ಈ ಘಟನೆಯು ಕೆಲವರಿಗಾದರೂ ಪಾಠವಾಗಿರಬೇಕು. ಈಗ ಹೊಸ ಹಾಡೊಂದು ವಿವಾದಕ್ಕೆ ಒಳಪಟ್ಟಿದೆ. ಆ ಹಾಡಿನ ಭವಿಷ್ಯವೀಗ ಪ್ರೇಮ್ ಅವರ ಕೈಯಲ್ಲಿದೆ. ಅವರು ಏನು ಅನ್ನಿಸಿತ್ತೋ ಅದನ್ನು ಮಾಡಿದ್ದಾರೆ. ಈಗ ಪ್ರತಿಕ್ರಿಯೆಗಳನ್ನೆಲ್ಲ ನೋಡಿದ್ದಾರೆ. ಮುಂದೇನು ಮಾಡಬೇಕೋ ಅದನ್ನು ಮಾಡುತ್ತಾರೆ. ಅವರು ಒಳ್ಳೊಳ್ಳೆಯ ಹಾಡುಗಳನ್ನು ಬರೆದಿರುವ ಅನುಭವಿ. ತಿದ್ದಿಕೊಳ್ಳುವುದು ಕಷ್ಟವೇನಲ್ಲ ಎಂದೇ ನನ್ನ ಭಾವನೆ.

ಹಾಡುಗಳಲ್ಲಿ ‘ಸೆರಗು ಮುಚ್ಚಿರಬೇಕು’ ಎಂಬ ಧೋರಣೆ ತುಂಬಾ ಮುಖ್ಯ. ಆಗೆಲ್ಲ ‘ಪಾಲಿಷ್ಡ್’ ಹಾಡುಗಳು ಇರುತ್ತಿದ್ದವು. ಈಗ ‘ಅನ್‌ಪಾಲಿಷ್ಡ್’ ಹಾಡುಗಳೂ ಬರುತ್ತಿವೆಯಷ್ಟೆ.

‘ಮಾಸ್’ ಕಾಸು ಕೊಡುತ್ತೆ ಎನ್ನುವ ಭಾವವಿದೆ. ‘ಕ್ಲಾಸ್’ ಕೂಡ ಕಾಸು ಕೊಡುತ್ತದೆ ಎನ್ನುವುದೂ ರುಜುವಾತಾಗಿದೆ. ಅದೂ ನಮ್ಮ ಲಕ್ಷ್ಯದಲ್ಲಿರಬೇಕು.

‘ಸುಂಟರಗಾಳಿ ಸುಂಟರಗಾಳಿ’, ‘ಓ ಕೆಂಚ ಓ ಕೆಂಚ’, ‘ಕುಲಕಬೇಡ ಕುಲಕಬೇಡ ಸಿಲ್ಕು’ ಎಂಬ ಹಾಡುಗಳನ್ನು ನಾನೂ ಬರೆದಿರುವೆ. ‘ಸುಂಟರಗಾಳಿ’ ಹಾಡಿನಲ್ಲಿ ‘ಗುಂಡಿಗೆ ಒಳಗೊಂದು ವಸ್ತು ಕಣೆ... ಅದು ಟಚ್ ಆದ ಕೂಡಲೇ ನಾನು ಸುಸ್ತು ಕಣೆ’ ಎಂಬ ಸಾಲನ್ನೂ ನಾನು ಬರೆದಿರುವೆ. ತುಸು ಎಚ್ಚರವಹಿಸಿದರೆ, ಪ್ರತಿಕ್ರಿಯೆಗಳು ಉತ್ತಮವಾಗಿಯೇ ಇರುತ್ತವೆ.

**–ಕೆ. ಕಲ್ಯಾಣ್**, ಚಿತ್ರಸಾಹಿತಿ–ಸ್ವರ ಸಂಯೋಜಕ

## ಕೇಳಿದವರು ನಗಬೇಕು

ಪುರುಷ, ಮಹಿಳೆ ಹೀಗೆ ಸಾರ್ವಜನಿಕರೆಲ್ಲರೂ ಸ್ವಲ್ಪವಾದರೂ ಹಾಡು ಕೇಳಿ ನಗಬೇಕು ಎಂದುಕೊಂಡೇ ನಾನು ಐಟಂ ಗೀತೆಗಳನ್ನು ಬರೆಯುವುದು. ಕೇಳುಗರ ಕಿವಿ ಪಕ್ಕ ಹೋಗಿ ವಿಶೇಷವಾಗಿ ಏನೋ ಹೇಳಿದ ಭಾವನೆ ಚಿತ್ರಸಾಹಿತ್ಯ ಕೇಳಿದ ಮೇಲೆ ಬರಬೇಕು ಎಂದುಕೊಳ್ಳುವೆ. ಬರೆಯುವಾಗ ಈ ರೀತಿಯ ಕೆಲವು ವಿಷಯಗಳನ್ನು ನನಗೆ ನಾನೇ ಹೇಳಿಕೊಳ್ಳುತ್ತೇನೆ. ಆಗ ಪದಗಳ ಜೊತೆಗೆ ಹೇಗೆಲ್ಲ ಆಟವಾಡಬೇಕು ಎನ್ನುವುದು ಗೊತ್ತಾಗುತ್ತದೆ.

**–ಯೋಗರಾಜ ಭಟ್**, ಚಿತ್ರಸಾಹಿತಿ, ನಿರ್ದೇಶಕ





ಇಲ್ಲದಿದ್ದರೂ ನಂಬಿಕೊಂಡು ಬಂದಿರುವ ಕೆಲವು ಮೌಲ್ಯಗಳಿವೆ. ಅವನ್ನು ಒಳ್ಳೆಯದು ಎಂದೇ ಭಾವಿಸುತ್ತೇವೆ. ಇರುವೆಯನ್ನು ಕೊಲ್ಲಬಾರದು ಎಂದು ಸಂವಿಧಾನ ಹೇಳುವುದಿಲ್ಲ. ಆದರೆ, ಕೊಲ್ಲದೇ ಇರುವುದು ಒಂದು ಮೌಲ್ಯ. ಇಂತಹ ಮೌಲ್ಯಗಳ ವಿಷಯದಲ್ಲಿ ಇವತ್ತು ಅನೇಕರು ರಾಜಿ ಆಗುತ್ತಿದ್ದಾರೆ.

ಅಂತಹ ಕಾಲಘಟ್ಟವಿದು.

‘ಕನ್ನಡ ಚಲನಚಿತ್ರ ಗೀತೆಗಳ ಸಾಮಾಜಿಕ ಪರಿಣಾಮ’ ಎಂಬುದು ನನ್ನ ಪಿಎಚ್.ಡಿ. ಮಹಾಪ್ರಬಂಧದ ವಿಷಯವಾಗಿತ್ತು. ಹೀಗಾಗಿ ಈ ವಿಷಯವಾಗಿ ನಾನು ಅಸಂಖ್ಯ ಉದಾಹರಣೆಗಳ ಸಹಿತ ಮಾತನಾಡಬಲ್ಲೆ.

ಕಳೆದ ಕೆಲವು ವರ್ಷಗಳಲ್ಲಿ ಐಟಂ ಗೀತೆಗಳಲ್ಲಿಯೂ ಒಂದು ಹೊಸ ಅಲೆ ಎದ್ದಿದೆ. ಬಿಡುಬೀಸಾಗಿ ಆಡುನುಡಿ ಬಳಸುತ್ತಲೇ ಪನ್ ಮಾಡುವ ಬರಹಗಾರರು ನಮ್ಮಲ್ಲಿ ಇದ್ದಾರೆ. ಹೀಗೆ ಆಡುನುಡಿಯ ಜೊತೆ ಆಟವಾಡುವಾಗ ತುಸು ಆಯತಪ್ಪಿದರೆ ಪ್ರಪಾತಕ್ಕೆ ಬೀಳಬೇಕಾಗುತ್ತದೆ. ‘ಕೆ.ಡಿ’ ಸಿನಿಮಾ ಗೀತೆಯಲ್ಲಿ ಆಗಿರುವುದು ಇದೇ ಪ್ರಮಾದ.

‘ಟೆರರ್’ ಎಂಬ ಸಿನಿಮಾಗೆ ನಾನು ‘ಬೊಂಬೆ ಬೊಂಬೆ ಬೆಲ್ಲದ ಬೊಂಬೆ’ ಎಂಬ ಹಾಡನ್ನು ತೀರಾ ಇತ್ತೀಚೆಗೆ ಬರೆದೆ. ಅದರ ಸಾಹಿತ್ಯವನ್ನು ನೀವು ಕೇಳಿದರೆ, ಆಡುನುಡಿಯ ಜೊತೆಗಿನ ಆಟದ ಸ್ಪಷ್ಟತೆ ಸಿಗುತ್ತದೆ. ಇರುವ ಮೂರು ಗೆರೆಗಳಲ್ಲಿ ಯಾವ ಗೆರೆ ಮೇಲೆ ಸಾಹಿತ್ಯವನ್ನು ಕೂರಿಸುತ್ತೇವೆ ಎಂಬ ಪ್ರಜ್ಞೆ ತುಂಬಾ ಮುಖ್ಯ.

ಪ್ರೇಮ್ ನಿರ್ದೇಶನದ ‘ಎಕ್ಸ್‌ಕ್ಯೂಸ್‌ಮಿ’ ಸಿನಿಮಾಗೆ ‘ರೋಡಿಗಿಳಿ ರಾಧಿಕಾ’ ಎಂಬ ಹಾಡನ್ನು ನಾನು ಬರೆದಿದ್ದೆ. ಅದು ಸೂಪರ್‌ಹಿಟ್ ಆಗಿತ್ತು. ತುಸು ಪೋಲಿತನ ಇರುವ ಹಾಡು ಅದು. ನಮಗೆ ನಾವೇ ಪರಾಮರ್ಶಿಸಿಕೊಂಡರೆ ಪ್ರಪಾತಕ್ಕೆ ಬೀಳದೇ ಇರುವುದಂತೂ ಸಾಧ್ಯವಿದೆ.

**–ಡಾ. ನಾಗೇಂದ್ರ ಪ್ರಸಾದ್**, ಚಿತ್ರಸಾಹಿತಿ, ನಿರ್ದೇಶಕ